Crl.Misc.No.1422/2024, PW-1

ಲಕ್ಷ್ಮೀ ಗಂಡ ಅಜಯಕುಮಾರ

ದಿನಾಂಕ 28-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**<u>ಪಾಟೀ ಸವಾಲು ಶ್ರೀ ಪಿ.ಎಮ್.ಬಿ ವಕೀಲರಿಂದ:-</u>**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ಅರ್ಜಿಯನ್ನು ನನಗೆ ಮತ್ತು ಮಕ್ಕಳಿಗೆ ಪೋಟಗಿ ಕೊಡಲು ಹಾಕಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತಿರುತ್ತದೆ. ದಿನಾಂಕ 14-05-2017 ರಂದು ನನ್ನ ಮದುವೆ ಎದುರುದಾರನೊಂದಿಗೆ ಮುಧೋಳದ ಮಲ್ಲಮ್ಮ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ನೇರವಾಗಿ ಗಂಡನ ಮನೆಗೆ ಹೋಗಿರುತ್ತೇನೆ. ಮದುವೆ ಸಮಯದಲ್ಲಿ 8 ತೊಲೆ ಬಂಗಾರ ಮತ್ತು 1 ಲಕ್ಷ ವರೋಪಚಾರ ಕೊಟ್ಟಿರುತ್ತೇವೆ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 1 ಲಕ್ಷದ ಬಾಂಡೆ ಸಾಮಾನು, ಬಟ್ಟೆ ಮತ್ತು ವಾಚನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶ್ಚಿತಾರ್ಥ ಸಮಯದಲ್ಲಿ ಅರ್ಧ ತೊಲೆ ಬಂಗಾರ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾದಿ ಕರಾರನ್ನು ನಿಶ್ಚಿತಾರ್ಥ ಸಮಯದಲ್ಲಿ ಬರೆದಿರುತ್ತಾರೆ. ಅದು ಯಾವ ದಿನಾಂಕ ಆಗಿದೆ ಎಂದು ನನಗೆ ನೆನಪಿಲ್ಲ. ನಿ.ಪಿ-1 ರಲ್ಲಿ ಬರೆದಿರುವ ವಿಷಯಗಳು ಸರಿ ಇರುತ್ತವೆ. ಮದುವೆ ಸಮಯದಲ್ಲಿ 4 ತೊಲೆ ತಾಳಿ ಸರ ಹಾಕಿದ್ದೇವೆ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-1 ರಲ್ಲಿ ಎದುರುದಾರನು 4 ತೊಲೆ ತಾಳಿ ಸರ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ನಿ.ಪಿ--1 ದಿನಾಂಕ ಮತ್ತು ಹೆಸರನ್ನು ತಿದ್ದಿದ್ದಾರೆ ಎಂದರೆ ಸರಿ. 1 ಲಕ್ಷ ತಿದ್ದಿರುತ್ತಾರೆ ಎಂದರೆ ಸರಿಯಲ್ಲ.

2. ಗಂಡನ ಮನೆಯಲ್ಲಿ ಅತ್ತೆ-ಮಾವ, ಅತ್ತೆಯ ತಂಗಿ ಮತ್ತು ಅವರ ಮಕ್ಕಳು ಇದ್ದರು. ಆಮೇಲೆ 14-15 ಜನ ವಾಸವಿರುತ್ತಾರೆ. ಈ ಕೇಸನ್ನು 14-15 ಜನ ಮೇಲೆ ಹಾಕಿರುತ್ತೇನೆ. ನಮ್ಮ ಎಲ್ಲಾ ನಾದಿನಿಯರ ಮದುವೆ ಆಗಿರುತ್ತದೆ. ಮದುವೆಯಾದ ಮೇಲೆ ನಾದಿನಿಯರು ಅವರವರ ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನಾನು 6 ವರ್ಷ ಗಂಡನ ಮನೆಯಲ್ಲಿ ವಾಸವಾಗಿದ್ದೆ ನಂತರ ಒಂದು ವರ್ಷ ಬಾಡಿಗೆ ಮನೆಯಲ್ಲಿ ಇದ್ದೆವು. ಒಂದು

ವರ್ಷದವರೆಗೆ ಮಾತ್ರ ಅತ್ತೆ-ಮಾವನ ಜೊತೆ ಇದ್ದು ನಂತರ ನಾನು ಮತ್ತು ನನ್ನ ಗಂಡ ಬೇರೆ ಮನೆಯಲ್ಲಿ ಇದ್ದೇವು ಎಂದರೆ ಸರಿಯಲ್ಲ. ನಾನು ಮತ್ತು ಗಂಡನು ವೀರಭದ್ರಯ್ಯ ಎನ್ನುವವರ ಮನೆಯಲ್ಲಿ ಸುಮಾರು ವರ್ಷಗಳ ಕಾಲ ಬಾಡಿಗೆ ಇದ್ದೆವು ಎಂದರೆ ಸರಿಯಲ್ಲ. ಅದಾದ ನಂತರ ಮಲ್ಲಮ್ಮನಗರ ಅಶೋಕ ಎನ್ನುವವರ ಮನೆಯಲ್ಲಿ ಒಂದುವರೆ ವರ್ಷದ ಕಾಲ ಬಾಡಿಗೆ ಇದ್ದೆವು ಎಂದರೆ ಸರಿಯಲ್ಲ. ಅದಾದ 4-5 ದಿನಗಳ ನಂತರ ನಾವು ನೀರಿಲ್ಲದ ಕಾರಣ ಆ ಮನೆಯನ್ನು ಬಿಟ್ಟು ಸಾಯಿ ನಗರದಲ್ಲಿ ನಮ್ಮ ನಾದಿನಿಯ ಹೆರಿಗೆ ಆಗುವವರೆಗೂ ಇದ್ದು ನಂತರ ನನ್ನ ಗಂಡನ ಮನೆಗೆ ಹೋಗಿರುತ್ತೇವೆ. ನಾನು ಕೇವಲ ಹೆಣ್ಣುಮಕ್ಕಳಿಗೆ ಜನ್ಮ ನೀಡುತ್ತಿದ್ದು ಗಂಡುಮಕ್ಕಳ ಬಾಗ್ಯವಿಲ್ಲ ಎಂದು ಹೀಯಾಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನನಗೆ ಯಾವುದೆ ಹೊಡೆಬಡೆ ಮಾಡಿಲ್ಲ ಬೇರೆಯವರ ಮಾತು ಕೇಳಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಗಂಡನ ಮನೆಯಲ್ಲಿ ಅತ್ತೆ-ಮಾವ ಮಾತ್ರ ಇದ್ದು ಬೇರೆ ಎದುರುದಾರರು ಇರಲಿಲ್ಲವಾದ ಕಾರಣ ಹಿಂಸೆ ಮಾಡುವ ಪ್ರಮೇಯ ಬರುವದಿಲ್ಲ ಎಂದರೆ ಸರಿಯಲ್ಲ. ಹಿಂಸೆ ಕೊಟ್ಟ ಕಾರಣ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿರುತ್ತೇನೆ ಆ ದಿನಾಂಕ ನನಗೆ ನೆನಪಿಲ್ಲ. ಮನೆ ಒಂದು ಅಂತಸ್ತು ಇದ್ದು ಅದರ ಎತ್ತರ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಮನೆ ಮೇಲಿಂದ ಬಿದ್ದರೆ ತಲೆಗೆ ಪೆಟ್ಟಾಗಿ ಕಾಲು ಮುರಿಯುತ್ತವೆ ಎಂದರೆ ಸರಿಯಲ್ಲ. ಪೋಟೋದಲ್ಲಿ ಕೇವಲ ಮೂಗಿಗೆ ಮತ್ತು ಗದ್ದಕ್ಕೆ ಗಾಯಗಳಾಗಿದ್ದು ಮನೆಯ ಮೇಲಿಂದ ಬಿದ್ದರೆ ಆ ರಿತಿ ಗಾಯವಾಗುವದಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ ತೋರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆಸ್ಪತ್ರೆಯಲ್ಲಿ ಬಾಜು ಪೇಸೆಂಟ್ ರವರ ಮೊಬೈಲಿನಿಂದ ನಮ್ಮ ತಂದೆ-ತಾಯಿಗೆ ಮಾಹಿತಿ ತಿಳಿಸಿರುತ್ತಾರೆ. ಆಸ್ಪತ್ರೆಗೆ ನನ್ನ ಗಂಡ ಕರೆದುಕೊಂಡು ಹೋಗಿರುತ್ತಾರೆ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ನಾನು ಮನೆಯ ಮುಂದೆ ಕಾಲು ಜಾರಿ ಬಿದ್ದು ಗಾಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

3. ನಮ್ಮ ಮಾವ ಬಾಂಡ್ ರೈಟರ್ ಕೆಲಸ ಮಾಡುತ್ತಾರೆ. ನಮ್ಮ ಮಾವನಿಗೆ 55 ವಯಸ್ಸಾಗಿದೆ. ನಮ್ಮ ಅತ್ತೆ ಗೃಹಿಣಿಯಾಗಿರುತ್ತಾರೆ. ನಮ್ಮ ಮಾವ ತಿಂಗಳಿಗೆ 1 ಲಕ್ಷ ದುಡಿಯುತ್ತಾರೆ ಎಂದು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ. ವಯಸ್ಸಾದ ಅತ್ತೆ-ಮಾವನನ್ನು ನೋಡಿಕೊಳ್ಳದೆ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ಮೇಲೆ ಕೌಟುಂಬಿಕ ದೌರ್ಜನ್ಯ ಎಸಗಿಲ್ಲ ಎಂದರೆ ಸರಿಯಲ್ಲ. 4 ಮತ್ತು 5ನೇ ಎದುರುದಾರರು ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ. 1ನೇ ಎದುರುದಾರನಿಗೆ 4 ಎಕರೆ

ಜಮೀನು ಮತ್ತು 2 ಪ್ಲಾಟ್ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದಂತೆ ಪರಿಹಾರವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)*

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.